# ಶ್ರೀರಾಮಕೃಷ್ಣರ ಭಾವಚಿತ್ರಗಳು

ಸ್ವಾಮಿ ವಿದ್ಯಾತ್ಮಾನಂದ

**ಮೂಲ ಆಂಗ್ಲಭಾಷೆಯಲ್ಲಿರುವ ಈ ಆಸಕ್ತಿಪೂರ್ಣ ಲೇಖನವನ್ನು ಬರೆದ ಸ್ವಾಮಿ ವಿದ್ಯಾತ್ಮಾನಂದರು ಅಮೆರಿಕದವರು. ಅವರು ಹಲವು ಉತ್ತಮ ಕೃತಿಗಳನ್ನು ರಚಿಸಿರುವರು. ಸುಮಾರು ಒಂದು ವರ್ಷದ ಹಿಂದೆ ದೇಹತ್ಯಾಗ ಮಾಡಿದರು. ಈ ಲೇಖನದ ಸಂಗ್ರಾಹಾನುವಾದ ಬ್ರ. ವಿವಿಕ್ತಚೈತನ್ಯರದು.**

ಭಾರತದಲ್ಲಿ ನಾನು ೧೯೬೩–೬೪ರಲ್ಲಿ ನೆಲಸಿದ್ದೆ. ಆಗ ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನು ಅಮೆರಿಕೆಯ ಪ್ರಸಿದ್ಧ ಸಾಹಿತಿ ಶ್ರೀ ಕ್ರಿಸ್ಟೋಫರ್ ಇಶರ್‌ವುಡ್ ಅವರು ಇಂಗ್ಲೀಷಿನಲ್ಲಿ ಬರೆಯುತ್ತಿದ್ದರು. ಅವರು ನನಗೊಂದು ಕಾರ್ಯವನ್ನು ವಹಿಸಿದರು. ಅದೇನೆಂದರೆ, ಪುಸ್ತಕದಲ್ಲಿ ಪ್ರಕಟವಾಗಲಿರುವ ಭಾವಚಿತ್ರಗಳ ಸಂಗ್ರಹಣೆ ಮತ್ತು ಅದಕ್ಕೆ ವಿವರಣೆಯನ್ನು ಕೊಡುವುದಕ್ಕೆ ಸಹಕರಿಸುವುದು. ಈ ಕಾರ್ಯ ನನಗೆ ಒಂದು ಸವಾಲಾಗಿ ಪರಿಣಮಿಸಿತು. ಇದರ ಒಂದು ಅಂಶ ನನ್ನನ್ನು ತುಂಬ ಆಕರ್ಷಿಸಿತು. ಅದೇನೆಂದರೆ ಶ್ರೀರಾಮಕೃಷ್ಣರ ಭಾವಚಿತ್ರಗಳು. ಇದರ ಬಗೆಗೆ ನಮಗೆ ತಿಳಿದಿರುವುದು ಅಲ್ಪ ಮತ್ತು ಅದೂ ಕೂಡ ಹಲವಾರು ಕಡೆ ಹರಿದು ಹಂಚಿ ಹೋಗಿದೆ ಎಂಬುದನ್ನು ನಾನು ಕಂಡುಕೊಂಡೆ. ಗುರುಮಹಾರಾಜರ ಭಾವಚಿತ್ರಗಳನ್ನು ತೆಗೆದ ಸನ್ನಿವೇಶಗಳಾಗಲೀ, ಅವರು ಹೇಗಿದ್ದರು ಎಂಬುದಾಗಿ ಕೂಡ, ಯಾವ ಒಂದು ಸ್ಥಳ ದಲ್ಲಿಯೂ, ನಿಶ್ಚಿತವಾಗಿ ತಿಳಿಯುವಂತಿರಲಿಲ್ಲ. ಈ ಮಹತ್ವದ ವಿಷಯದ ಬಗ್ಗೆ ದೊರಕಬಹುದಾದ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಕ್ರೋಡೀಕರಿಸುವುದು ಮುಖ್ಯವೆಂದು ನನಗೆ ತೋರಿತು. ಹಾಗೆಂದೇ ಶ್ರೀರಾಮಕೃಷ್ಣರ ಭಾವಚಿತ್ರಗಳ ಮೇಲಿನ ಸಂಶೋಧನೆಯನ್ನು ನಾನು ಕೈಗೊಂಡೆ. ಇದಕ್ಕಾಗಿ ಲಭ್ಯವಿರುವ ಹಲವಾರು ಆಕರಗಳನ್ನು ಸಂಶೋಧಿಸಿದೆ ಮತ್ತು ರಾಮಕೃಷ್ಣ ಮಹಾಸಂಘದ ಹಿರಿಯ ಸ್ವಾಮೀಜಿಯವರುಗಳನ್ನು ಸಂದರ್ಶಿಸಿದೆ. ಇದರಿಂದಾಗಿ ಶ್ರೀರಾಮಕೃಷ್ಣರ ಭೌತಿಕ ರೂಪ ಮತ್ತು ಅವರ ಭಾವಚಿತ್ರಗಳ ವಿಷಯದಲ್ಲಿ ತುಂಬ ವಿಷಯಸಂಗ್ರಹಣೆಯನ್ನು ಮಾಡಲು ನನಗೆ ಸಾಧ್ಯವಾಯಿತು.

> ಶ್ರೀಮಾತೆಯವರು ಹೇಳುತ್ತಾರೆ :
> "ದೇಹ ಮತ್ತು ಅದರ ನೆರಳು ಒಂದೇ. ಈ ಫೋಟೋ ಅವರ ನೆರಳಲ್ಲದೆ ಮತ್ತೇನು? ಅವರ ಚಿತ್ರದ ಮುಂದೆ ನಿರಂತರವಾಗಿ ಪ್ರಾರ್ಥಿಸಿದರೆ, ಶ್ರೀರಾಮಕೃಷ್ಣರೇ ಅದರ ಮೂಲಕ ಆವಿರ್ಭವಿಸುತ್ತಾರೆ."

ಕೂಲಂಕಷ ಅಧ್ಯಯನದ ನಂತರ ನಾನು ಕಂಡುಕೊಂಡದ್ದು ಇಷ್ಟು : ಶ್ರೀರಾಮಕೃಷ್ಣರ ಜೀವಿತಕಾಲದಲ್ಲಿ ತೆಗೆದ ಅವರ ಭಾವಚಿತ್ರಗಳು ಕೇವಲ ಮೂರು. ಅದರಲ್ಲಿ ಮೊದಲನೆಯದನ್ನು ಕೇಶವ ಚಂದ್ರಸೇನನ ಮನೆಯಲ್ಲಿ ತೆಗೆಯಲಾಯಿತು. ಎರಡನೆಯದನ್ನು ಒಂದು ಸ್ಟುಡಿಯೋದಲ್ಲಿ ತೆಗೆಯಲಾಗಿದೆ. ಮೂರನೆಯದು ಪ್ರಸಿದ್ಧವಾದ, ನಾವಿಂದು ಪೂಜಿಸಲು ಬಳಸುವ ಚಿತ್ರ. ಅದು ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರು ಉಚ್ಚ ಸಮಾಧಿ ನೆಲೆಯಲ್ಲಿ ಇದ್ದಾಗ ತೆಗೆದದ್ದು. ಅದರೊಂದಿಗೆ ಅವರ ಮಹಾಸಮಾಧಿಯ ನಂತರ, ಅಂದಿನ ಮಧ್ಯಾಹ್ನವೇ,ಎರಡು ಫೋಟೋಗಳನ್ನು ತೆಗೆದಿದ್ದಾರೆ. ಅವೆರಡೂ ಬಹುತೇಕ ಸಮಾನವಾಗಿವೆ. ಈ ಮೇಲಿನ ಚಿತ್ರಗಳ ಅಧಿಕೃತ ನಕಲುಗಳು ನಮಗೆ ಈಗ ಲಭ್ಯವಿಲ್ಲ. ನಮಗಿಂದು ದೊರಕುವ ಹಲವಾರು ಪ್ರತಿಗಳು ಮೂಲ ಪ್ರತಿಯನ್ನು ಉತ್ತಮಗೊಳಿಸಲು ಮಾಡಿರಬಹುದಾದ ಮಾರ್ಪಾಡಿನಿಂದಲೇ ಮಾಡಲ್ಪಟ್ಟವು.

ಸ್ವಾಮಿ ನಿರ್ವಾಣಾನಂದರು ರಾಮಕೃಷ್ಣಮಹಾಸಂಘದ ಉಪಾಧ್ಯಕ್ಷರಾಗಿದ್ದರು. ಅವರನ್ನು ನಾನು ಸಂದರ್ಶಿಸಿದಾಗ, ಅವರು ಇನ್ನೊಂದು ವಿಷಯ ನನಗೆ ತಿಳಿಸಿದರು. ಗೃಹಸ್ಥಭಕ್ತ ರಾಮಚಂದ್ರ ದತ್ತನು ಗುರುಮಹಾರಾಜರ ಇನ್ನೊಂದು ಫೋಟೋವನ್ನು ತೆಗೆಸಿದ್ದನು ಎಂದು ಅವರು ಸ್ವಾಮಿ ಅಖಂಡಾನಂದರಿಂದ ಕೇಳಿದ್ದರಂತೆ. ಅದನ್ನು ನೋಡಿದ ಶ್ರೀರಾಮಕೃಷ್ಣರು "ಇದು ಯಾರು? ನಾನಿಷ್ಟು ಕೋಪಿಷ್ಠನಂತೆ ಕಾಣುವೆನೆ?" ಎಂದುಬಿಟ್ಟರಂತೆ. ರಾಮಚಂದ್ರ ದತ್ತ ಮಾರುತ್ತರ ನೀಡಲಿಲ್ಲ. ಫೋಟೋ, ನೆಗಟಿವ್ ಎಲ್ಲವನ್ನೂ ತೆಗೆದುಕೊಂಡು ಹೋಗಿ ಗಂಗಾನದಿಯಲ್ಲಿ ಬಿಸಾಡಿಬಿಟ್ಟ. ರಾಮಚಂದ್ರ ದತ್ತನ ಗುರುಭಕ್ತಿ ಮೆಚ್ಚತಕ್ಕದ್ದೆ. ಆದರೆ, ಶ್ರೀರಾಮಕೃಷ್ಣರ

ಆ ಚಿತ್ರ ಹೇಗಿತ್ತು ಎಂದು ತಿಳಿಯುವ ಅವಕಾಶ ಎಲ್ಲ ಕಾಲಕ್ಕೂ ತಪ್ಪಿಹೋಯಿತು. ಇದರಿಂದ ನಮಗೆ ತಿಳಿದುಬರುವುದೆಂದರೆ, ಶ್ರೀರಾಮಕೃಷ್ಣರ ಚಿತ್ರಗಳು ಇದ್ದದ್ದು ಒಟ್ಟು ೬. ಅವುಗಳಲ್ಲಿ ನಮಗೆ ಈಗ ಉಳಿದಿರುವುದು ೫ ಮಾತ್ರ.

ನನ್ನ ಸಂಶೋಧನೆಯ ಕಾರ್ಯಕ್ಕೆ ನಾನು ಹಲವಾರು ಆಂಗ್ಲ ಹಾಗೂ ಬಂಗಾಳಿ ಗ್ರಂಥಗಳ ಮತ್ತು ಪತ್ರಿಕೆಗಳ ಸಹಾಯವನ್ನು ಪಡೆದಿದ್ದೇನೆ. ಮೊದಲು ನಾವು ಶ್ರೀರಾಮಕೃಷ್ಣರ ಭೌತಿಕ ರೂಪ ಹೇಗಿತ್ತು ಎಂಬ ಬಗ್ಗೆ ವಿಚಾರ ಮಾಡೋಣ. ನಂತರ ಲಭ್ಯವಿರುವ ಅವರ ಛಾಯಾಚಿತ್ರಗಳಲ್ಲಿ ಒಂದೊಂದನ್ನಾಗಿ ತೆಗೆದುಕೊಂಡು, ಅವುಗಳ ಬಗ್ಗೆ ಮಾಹಿತಿ ಪಡೆಯೋಣ.

## ಶ್ರೀರಾಮಕೃಷ್ಣರ ಭೌತಿಕ ರೂಪ

ಶ್ರೀರಾಮಕೃಷ್ಣರ ತೂಕ ಮತ್ತು ಎತ್ತರಗಳು ಎಲ್ಲಿಯೂ ದಾಖಲಾದ ಹಾಗೆ ತೋರಿಬರುವುದಿಲ್ಲ. ಆದಾಗ್ಯೂ, ಸ್ವಾಮಿ ನಿರ್ವಾಣಾನಂದರು ಶ್ರೀಗುರುಮಹಾರಾಜರು ಐದು ಅಡಿ ಒಂಬತ್ತುಕಾಲು ಇಂಚುಗಳಷ್ಟು ಎತ್ತರವಿದ್ದರು ಎಂದು ಲೆಕ್ಕ ಹಾಕಿದ್ದಾರೆ. ಅದಕ್ಕೆ ಅವರು ಈಗ ಕಾಶಿಪುರ ಉದ್ಯಾನವನದಲ್ಲಿರುವ, ಶ್ರೀರಾಮಕೃಷ್ಣರು ಉಪಯೋಗಿಸುತ್ತಿದ್ದ ಕೋಟಿನ ಆಧಾರವನ್ನು ತೆಗೆದುಕೊಂಡಿದ್ದಾರೆ. ಗುರುಮಹಾರಾಜರ ಆಕರ್ಷಕ ವ್ಯಕ್ತಿತ್ವದ ಬಗ್ಗೆ ಶ್ರೀಮಾತೆ ಶಾರದಾದೇವಿಯವರು ತಮ್ಮ ಸಂಭಾಷಣೆಗಳಲ್ಲಿ ಹೀಗೆ ಹೇಳುತ್ತಾರೆ: " ಅವರ ಮೈಬಣ್ಣ ಚಿನ್ನದ ಬಣ್ಣ. ಅದು ಅವರು ತೋಳಿನಲ್ಲಿ ಧರಿಸುತ್ತಿದ್ದ ತಾಯಿತದ ಹೊಂಬಣ್ಣಕ್ಕೆ ಹೊಂದಿಕೊಂಡಿತ್ತು. ನಾನು ಅವರ ಮೈಯನ್ನು ಎಣ್ಣೆಯಿಂದ ನೇವರಿಸುತ್ತಿದ್ದಾಗ, ಅವರ ಇಡೀ ದೇಹದಿಂದ ಬೆಳಕು ಹೊರಸೂಸುತ್ತಿದ್ದುದನ್ನು ಕಣ್ಣಾರೆ ಸ್ಪಷ್ಟವಾಗಿ ಕಂಡಿದ್ದೇನೆ. ದೇಗುಲದ ಕೋಣೆಯಿಂದ ಅವರು ಹೊರಬಂದರೆ, ಜನ ಅವರನ್ನು ನೋಡಲು ಸಾಲುಸಾಲಾಗಿ ನಿಲ್ಲುತ್ತಿದ್ದರು. ' ಅಗೋ ಅಲ್ಲಿ ಹೋಗುತ್ತಿದ್ದಾರೆ ' ಎಂದು ಉದ್ಗರಿಸುತ್ತಿದ್ದರು. ಶ್ರೀಗುರುಮಹಾರಾಜರದು ದೃಢಕಾಯ. ತಮ್ಮ ಧೀರಗಂಭೀರ ಹೆಜ್ಜೆಗಳಿಂದ ದಾಪುಗಾಲು ಹಾಕುತ್ತ ಸ್ನಾನಕ್ಕಾಗಿ ಅವರು ಗಂಗೆಯೆಡೆ ಹೊರಟರೆಂದರೆ, ಜನ ಮೈಮರೆತು ನೋಡುತ್ತಿದ್ದರು. ನಾನಂತೂ ಅವರು ಎಂದೂ ಖಿನ್ನರಾಗಿದ್ದನ್ನು ಕಂಡಿಲ್ಲ. ಐದು ವರ್ಷದ ಬಾಲಕನಿರಲಿ, ಹಣ್ಣು ಹಣ್ಣು ಮುದುಕನಿರಲಿ, ಎಲ್ಲರೊಡನೆ ನಗುನಗುತ್ತ ಒಡನಾಡುತ್ತಿದ್ದರು ಗುರುಮಹಾರಾಜರು."

ಈ ಬಗ್ಗೆ ಸ್ವಾಮಿ ಬ್ರಹ್ಮಾನಂದರ ಜೀವನದಲ್ಲಿ ನಡೆದೊಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ ಸ್ವಾಮಿ ನಿರ್ವಾಣಾನಂದರು. ಈ ಘಟನೆ ನಡೆದದ್ದು ಪ್ರಾಯಶಃ ೧೯೧೮ರ ಚಳಿಗಾಲದ ಸಮಯದಲ್ಲಿ. ಆಗ ಸ್ವಾಮಿ ಬ್ರಹ್ಮಾನಂದರು ಭಕ್ತ ಬಲರಾಮ ಬೋಸರ ಮನೆಯಲ್ಲಿ ವಾಸಿಸುತ್ತಿದ್ದರು. ಅವರ ಶಿಷ್ಯೆಯಾದ ಭಕ್ತೆಯೊಬ್ಬರಿಗೆ ಶ್ರೀರಾಮಕೃಷ್ಣರ ಅಮೃತಶಿಲೆಯ ಮೂರ್ತಿಯೊಂದನ್ನು ಮಾಡಿಸಬೇಕೆಂಬ ಸಂಕಲ್ಪ ಉಂಟಾಯಿತು. ಆಕೆ ತನಗೆ ಹೆಚ್ಚು ಪರಿಚಯವಿದ್ದ ಸ್ವಾಮಿ ಶಾರದಾನಂದರ ಬಳಿ ಈ ಬಯಕೆಯನ್ನು ಹೇಳಿಕೊಂಡರು. ಇದಕ್ಕೆ ಅವರು ಪ್ರೋತ್ಸಾಹ ಕೊಟ್ಟರು. ಅದರಂತೆ ಈ ಕಾರ್ಯವನ್ನು ಕಲ್ಕತ್ತೆಯಲ್ಲಿದ್ದ ಮಹಾರಾಷ್ಟ್ರದ ಕಡೆಯ ಸುವಿಖ್ಯಾತ ಶಿಲ್ಪಿಯೊಬ್ಬರಿಗೆ ವಹಿಸಲಾಯಿತು. ಕೆಲಸಮಯದ ನಂತರ ಆ ಶಿಲ್ಪಿ ಮೂರ್ತಿಯ ಜೇಡಿಮಣ್ಣಿನ ಮಾದರಿಯೊಂದನ್ನು ತಯಾರಿಸಿದನು. ಅದನ್ನು ಪರೀಕ್ಷಿಸಬೇಕೆಂದು ಸ್ವಾಮಿ ಶಾರದಾನಂದರು ಸ್ವಾಮಿ ಬ್ರಹ್ಮಾನಂದರನ್ನು ಪ್ರಾರ್ಥಿಸಿದರು. ಅದರಂತೆ ಅವರು ಇತರರೊಡನೆ ಆ ಶಿಲ್ಪಿಯ ಕಾರ್ಯಾಗಾರಕ್ಕೆ ಹೋಗಿ ಆ ಮಾದರಿಯನ್ನು ಕೂಲಂಕಷವಾಗಿ ಪರೀಕ್ಷಿಸಿ, ಎರಡು ಸಂಗತಿಗಳನ್ನು ಎತ್ತಿತೋರಿಸಿದರು. ಅದೇನೆಂದರೆ, ಎರಡು ಕೈಗಳ ಬೆರಳುಗಳನ್ನು ಜೋಡಿಸಿ ಕುಳಿತುಕೊಳ್ಳುವ ಬೇರಾವುದೇ ವ್ಯಕ್ತಿ ಸ್ವಲ್ಪ ಬಗ್ಗಿರುತ್ತಾನೆ. ಅದರಂತೆಯೆ ಶಿಲ್ಪಿ ಮಾದರಿಯಲ್ಲಿ ತೋರಿಸಿದ್ದ. ಸ್ವಾಮಿ ಬ್ರಹ್ಮಾನಂದರು ಶ್ರೀರಾಮಕೃಷ್ಣರು ಹಾಗೆ ಬಗ್ಗುತ್ತಿರಲಿಲ್ಲವೆಂದೂ ಆಜಾನುಬಾಹುವಾದ ಅವರ ಕೈಗಳು ತುಂಬ ಉದ್ದವಾಗಿದ್ದವೆಂದೂ ಹೇಳಿದರು. ಇನ್ನೊಂದು ಅಂಶವೆಂದರೆ, ಇತರರಂತೆ ಶ್ರೀರಾಮಕೃಷ್ಣರ ಕಿವಿಗಳ ಮೇಲ್ಭಾಗವು ಕಣ್ಣುಹುಬ್ಬಿನ ಗೆರೆಗಿಂತ ಮೇಲಿರದೆ, ಅದಕ್ಕಿಂತ ಕೆಳಗಿರುವುದು. ಅದು ಕಣ್ಣುರೆಪ್ಪೆಯ ಕೆಳಭಾಗದಿಂದಲೇ ಆರಂಭಗೊಂಡಿದೆ. ಸ್ವಾಮಿ ಬ್ರಹ್ಮಾನಂದರು ಈ ಎರಡು ಅಂಶಗಳನ್ನು ಶಿಲ್ಪಿಗೆ ಹೇಳಿದಾಗ, ಅದರಂತೆ ಮಾದರಿಯನ್ನು ಮಾರ್ಪಡಿಸುವುದಾಗಿ ಆತ ಹೇಳಿದ. ಒಂದು ವಾರ ಕಳೆದ ಬಳಿಕ, ತಿರುಗಿ ಹೋಗಿ ನೋಡಿ ಪರೀಕ್ಷಿಸಿ, ಈಗ ಎಲ್ಲವೂ ಸರಿಯಾಗಿದೆಯೆಂದರು ಸ್ವಾಮಿ ಬ್ರಹ್ಮಾನಂದರು. ಆ ಮೂರ್ತಿ ಈಗ ವಾರಣಾಸಿಯ ರಾಮಕೃಷ್ಣ ಅದ್ವೈತಾಶ್ರಮದಲ್ಲಿ ಪೂಜಿಸಲ್ಪಡುತ್ತಿದೆ.

ಬೇರೆಯ ಭಗವದವತಾರಗಳ ರೂಪವನ್ನು, ಸಾಂಪ್ರದಾಯಿಕವಾಗಿ ಹೇಳಲಾಗುವ ಅವರುಗಳ ದೇಹವರ್ಣನೆಯನ್ನು ಓದಿ ತಿಳಿದೋ ಭಗವದ್ದರ್ಶನವನ್ನು ಹೊಂದಿದ ಮಹಾತ್ಮರ ಮಾತುಗಳಿಂದಲೋ ಊಹಿಸಿಕೊಳ್ಳಬೇಕಾಗುವುದು. ಆದರೆ ಶ್ರೀರಾಮಕೃಷ್ಣರ ವಿಷಯದಲ್ಲಿ ಹಾಗಲ್ಲ. ಜಗತ್ತಿನ ಇತಿಹಾಸದಲ್ಲಿ ಭಾವಚಿತ್ರವಿರುವ ಪ್ರಪ್ರಥಮ ಭಗವದವತಾರವೆಂದರೆ ಶ್ರೀರಾಮಕೃಷ್ಣರು. ಅವರ ಫೋಟೋಗಳು ಅವರ ರೂಪವನ್ನು ಯಥಾವತ್ತಾಗಿ ನಮಗೆ ತೋರಿಸುತ್ತವೆ.

ಶ್ರೀರಾಮಕೃಷ್ಣರು ತಾವು ಸಹಜಾವಸ್ಥೆಯಲ್ಲಿರುವಾಗ ಯಾರಿಗೂ ತಮ್ಮ ಫೋಟೋವನ್ನು ತೆಗೆಯಲು ಅನುಮತಿ ನೀಡುತ್ತಿರಲಿಲ್ಲವೆಂದು ತೋರುತ್ತದೆ. ಅದಕ್ಕೆ ಸಾಕಷ್ಟು ಆಧಾರಗಳಿವೆ. ಅವರ ಫೋಟೋಗಳೆಲ್ಲ ಅವರು ಸಮಾಧಿನೆಲೆಯಲ್ಲಿದ್ದಾಗಲೇ ತೆಗೆದಂಥವು. ಆ ಸಮಯದಲ್ಲಿ ಸುತ್ತ ಏನಾಗುತ್ತಿರುವುದೆಂಬ ಅರಿವು ಅವರಿಗಿರಲಿಲ್ಲ. ಆದರೂ ಅವರ ಅರಿವಿಗೆ ಬಾರದೆ ಈ ಫೋಟೋಗಳನ್ನು ತೆಗೆಯಲಾಯಿತೆಂದು ಹೇಳಲಾಗದು. ಅವತಾರಶ್ರೇಷ್ಠರಾದ ಅವರಿಗೆ ತಿಳಿಯದೆ, ಯಾವುದೂ ನಡೆಯದು. ಮಾನವತೆಯ ಮೇಲಿನ ಪರಮ ಕಾರುಣ್ಯದಿಂದಲೇ ಅವರು ತಮ್ಮ ಫೋಟೋಗಳನ್ನು ತೆಗೆಯುವುದಕ್ಕೆ ಬಿಟ್ಟುಕೊಟ್ಟರು ಎಂದು ಹೇಳಬಹುದು.



ಚಿತ್ರ ೧ : ಕೇಶವಚಂದ್ರಸೇನನ ಮನೆಯಲ್ಲಿ ಶ್ರೀರಾಮಕೃಷ್ಣರು

ಈ ಚಿತ್ರ ನಮಗೆ ತೋರಿಸುವುದು ಇಷ್ಟನ್ನು: ಶ್ರೀರಾಮಕೃಷ್ಣರು ನಿಂತುಕೊಂಡಿದ್ದಾರೆ. ಅವರ ಬಲಗೈ ಮೇಲಕ್ಕೆ ಚಾಚಿದೆ ಮತ್ತು ಎಡಗೈ ಎದೆಯಮೇಲೆ ಮುದ್ರೆಯಲ್ಲಿರುವಂತೆ ಇದೆ. ವದನಾರವಿಂದದಿಂದ ಉಜ್ವಲಕಾಂತಿ ಹೊಮ್ಮುತ್ತಿರುವುದು. ಅರ್ಧನಿಮೀಲಿತ ನೇತ್ರಗಳು. ಹೃದಯ್ ಶ್ರೀರಾಮಕೃಷ್ಣರನ್ನು ಹಿಡಿದುಕೊಂಡಿದ್ದಾನೆ. ಬಂಗಾಳಿ ಸಭ್ಯವ್ಯಕ್ತಿಯ ಉಡುಪನ್ನು ಧರಿಸಿದ್ದಾರೆ. ಸಣ್ಣಂಚಿನ ಬಿಳಿಪಂಚೆಯನ್ನು ಉಟ್ಟುಕೊಂಡಿದ್ದಾರೆ. ಉದ್ದತೋಳಿನ ಜುಬ್ಬ ಧರಿಸಿದ್ದಾರೆ. ಮೇಲ್ವಸ್ತ್ರವನ್ನು ಅವರ ಸೊಂಟಕ್ಕೆ ಸುತ್ತಲಾಗಿದೆ. ನೆಲದ ಮೇಲೆ ಹಲವು ಮಂದಿ ಕುಳಿತಿದ್ದಾರೆ. ಕೊಠಡಿಯ ಕಿಟಕಿಗಳನ್ನು ವಿಶಾಲವಾಗಿ ತೆರೆದಿಟ್ಟಿದ್ದಾರೆ. ಜನರ ಹಿಂದೆ ಪರದೆಯೊಂದು ಕಾಣುತ್ತಿದೆ. ನೆಲದ ಮೇಲೆ ವಸ್ತ್ರವೊಂದನ್ನು ಹಾಸಿ, ಒರಗುದಿಂಬುಗಳನ್ನು ಇಟ್ಟಿದ್ದಾರೆ. ಶ್ರೀರಾಮಕೃಷ್ಣರ ಕಾಲುಗಳು ಚಿಕ್ಕ ರಗ್ಗಿನ ಮೇಲೆ ನಿಂತಿವೆ.

**ಶ್ರೀರಾಮಕೃಷ್ಣ** ವಚನವೇದದ ಪ್ರಕಾರ ಈ ಫೋಟೋವನ್ನು ಸೆಪ್ಟೆಂಬರ್ ೨೧, ೧೮೭೯, ಭಾನುವಾರದಂದು ಕಲ್ಕತ್ತೆಯ ಅಪ್ಪರ್ ಸರ್ಕ್ಯುಲರ್ ರಸ್ತೆಯಲ್ಲಿರುವ ಲಿಲಿಕಾಟೇಜ್ ಎಂಬ ಹೆಸರಿನ ಕೇಶವ ಚಂದ್ರಸೇನನ ಮನೆಯಲ್ಲಿ ತೆಗೆಯಲಾಯಿತು. ಆ ಸಂದರ್ಭದಲ್ಲಿ ಗುರುಮಹಾರಾಜರು ಸಮಾಧಿಯಲ್ಲಿದ್ದರು. ಸುಪ್ರಸಿದ್ಧ ಗಾಯಕ ಮತ್ತು ಬ್ರಹ್ಮಸಮಾಜದ ಭಕ್ತ ತ್ರೈಲೋಕ್ಯನಾಥ ಸಂನ್ಯಾಲನೂ ಆ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾನೆ.

೧೮೭೯ರ ವೇಳೆಗಾಗಲೇ ಕೇಶವಚಂದ್ರಸೇನ ಮತ್ತು ಶ್ರೀರಾಮಕೃಷ್ಣರ ನಡುವಿನ ಮಧುರ ಬಾಂಧವ್ಯ ಗಾಢವಾಗಿತ್ತು. ತನ್ನ ಫೋಟೋವನ್ನು ತೆಗಿಸಿಕೊಂಡ ಕೇಶವ ಶ್ರೀರಾಮಕೃಷ್ಣರ ಫೋಟೋ ಒಂದನ್ನು ಕೂಡ ತೆಗೆಸಬೇಕು ಎಂದುಕೊಂಡನೆಂದು ಕಾಣುತ್ತದೆ. ಪ್ರಾಯಶಃ ಅದು ಅವನ ಸ್ವಂತ ಉಪಯೋಗಕ್ಕೆ ಸೀಮಿತವಾಗಿತ್ತು. ಈ ಫೋಟೋವನ್ನು ತೆಗೆದವರು ಯಾರು ಎಂದು ಪತ್ತೆಹಚ್ಚುವಲ್ಲಿ ನಾನು ಸಫಲನಾಗಲಿಲ್ಲ. ಈ ಫೋಟೋದ ಹಳೆಯ ಪ್ರತಿಯೊಂದರ ಹಿಂದೆ ಬೆಂಗಾಲ್ ಫೋಟೋಗ್ರಾಫರ್ಸ್, ಸ್ಥಾಪನೆ ೧೮೬೨, ೧೯/೮, ಬೋ ಬಜಾರ್, ಕಲ್ಕತ್ತೆ ಎಂದು ಬರೆದಿದೆ. ಆ ಪ್ರದೇಶವನ್ನೆಲ್ಲ ಹುಡುಕಿ ನೋಡಿದೆ. ಆದರೆ ಬೆಂಗಾಲ್ ಫೋಟೋಗ್ರಾಫರ್ಸ್‌ನ ಕುರುಹಾಗಲೀ, ಇತರೆ ಯಾವುದೇ ಮಾಹಿತಿಯಾಗಲೀ ನನಗೆ ದೊರಕಲಿಲ್ಲ.

ಕೇಶವಚಂದ್ರಸೇನನು ಒಮ್ಮೆ ತೀರ್ಥಯಾತ್ರೆ ಮಾಡುತ್ತಿದ್ದನು. ಆಗ ಕಾಶಿಯ ಬಳಿಯ ಗಾಜಿಯಾಬಾದಿನಲ್ಲಿರುವ ಶ್ರೀ ಪವಾಹಾರಿ ಬಾಬಾ ಅವರನ್ನು ಸಂದರ್ಶಿಸಿದ. ರಾಮಕೃಷ್ಣ ಮಹಾಸಂಘದ ಏಳನೆಯ ಮಹಾಧ್ಯಕ್ಷರಾಗಿದ್ದ ಸ್ವಾಮಿ ವಿಶುದ್ಧಾನಂದಜಿಯವರ ಪ್ರಕಾರ ಈ ಫೋಟೋದ ಪ್ರತಿಯೊಂದನ್ನು ಕೇಶವಸೇನ ಪವಾಹಾರಿಬಾಬಾರಿಗೆ ಕೊಟ್ಟನು. ಇದನ್ನು ಪವಾಹಾರಿ ಬಾಬಾ ಅವರ ಕುಟೀರದಲ್ಲಿ ಕೆಲವರು ನೋಡಿದ್ದಾರೆಂದು ಭಕ್ತನೊಬ್ಬನು ಶ್ರೀರಾಮಕೃಷ್ಣರಿಗೆ ಅರುಹುತ್ತಾನೆ. ಇದಕ್ಕೆ ಅವರು ನಕ್ಕು ಹೇಳುತ್ತಾರೆ "**ಇದೊಂದು** ಬರಿ ದಿಂಬು **ಮಾತ್ರ.**" ಈ ವೃತ್ತಾಂತವನ್ನು ನಾವು **ಶ್ರೀರಾಮಕೃಷ್ಣ** ವಚನವೇದದಲ್ಲಿ ಕಾಣಬಹುದು.

ಸ್ವಾಮಿ ಬ್ರಹ್ಮಾನಂದರ ಶಿಷ್ಯರಾದ ಸ್ವಾಮಿ ರಾಘವಾನಂದರು ಈ ಫೋಟೋ ತೆಗೆದ ಸಂದರ್ಭದ ಬಗ್ಗೆ ಬೆಳಕು ಚೆಲ್ಲುತ್ತಾರೆ. ಅಂದು ಕೇಶವನ ಮನೆಯಲ್ಲಿ ಏರ್ಪಾಡಾಗಿದ್ದ ಸಂಕೀರ್ತನೆಯು ಹೊಮ್ಮಿಸಿದ ಭಾವಾವೇಶದಿಂದ ಉನ್ಮತ್ತರಾದ ಶ್ರೀರಾಮಕೃಷ್ಣರು ಓಂ ಎಂದು ಉಚ್ಚರಿಸುತ್ತ ಒಮ್ಮೆಲೆ ಎದ್ದುನಿಂತರು. ಬಲಗೈಯನ್ನು ಮೇಲಕ್ಕೆತ್ತಿ ನಿಂತ ಅವರ ಇಂದ್ರಿಯಗಳೆಲ್ಲವೂ ಸ್ತಬ್ಧವಾಗಿ, ಸಮಾಧಿ ನೆಲೆಯನ್ನೈದರು. ಜಡಗಟ್ಟಿದ ಶರೀರ ಎಲ್ಲಿ ನೆಲಕ್ಕೆ ಬೀಳುವುದೊ ಎಂದು ಹೃದಯ್ ಆಸರೆಯಾಗಿ ನಿಂತ. ಕೆಳಗೆ ಬಿದ್ದ ಮೇಲ್ವಸ್ತ್ರವನ್ನು ಅವನೇ ಸೊಂಟಕ್ಕೆ ಕಟ್ಟಿರಬೇಕು. ಈ ಸಂದರ್ಭದಲ್ಲಿ ಫೋಟೋವನ್ನು ತೆಗೆಯಲಾಯಿತು. ಶ್ರೀರಾಮಕೃಷ್ಣರ ಬಲಗಡೆ ಕುಳಿತಿರುವ ವ್ಯಕ್ತಿಯೇ ತ್ರೈಲೋಕ್ಯನಾಥ ಸಂನ್ಯಾಲ್. ಇತರರನ್ನು ಗುರುತು ಹಿಡಿಯಲಾಗಿಲ್ಲ.

ಶ್ರೀರಾಮಕೃಷ್ಣರ ಈ ಅಪೂರ್ವ ಭಂಗಿಯ ಅಂತರಾರ್ಥ

ವೇನು? ಮೇಲೆತ್ತಿ ಹಿಡಿದಿರುವ ಬಲಗೈ ಎಲ್ಲವೂ ಅಲ್ಲಿದೆಯೆಂದೂ ಎಡಗೈ ಈ ಪ್ರಪಂಚದಲ್ಲಿ ಏನೂ ಇಲ್ಲವೆಂದೂ ಸೂಚಿಸುವುದು ಎಂದು ಸ್ವಾಮಿ ಪ್ರೇಮಾನಂದರು ಅರ್ಥವಿವರಣೆ ನೀಡಿದ್ದಾರೆ ಎಂದು ಸ್ವಾಮಿ ನಿರ್ವಾಣಾನಂದರು ಹೇಳುತ್ತಾರೆ.

## ಚಿತ್ರ ೨ : ಶ್ರೀರಾಮಕೃಷ್ಣರ ಸ್ಟುಡಿಯೋ ಚಿತ್ರ

ಈ ಚಿತ್ರ ನಮಗೆ ಈ ಸನ್ನಿವೇಶವನ್ನು ತೋರಿಸುತ್ತದೆ: ಶ್ರೀರಾಮಕೃಷ್ಣರು ತಮ್ಮ ಬಲಗೈಯನ್ನು ಮರದ ಒಂದು ಕಂಬದ ಮೇಲೆ ಆಸರೆಯಾಗಿಟ್ಟುಕೊಂಡು ನಿಂತಿದ್ದಾರೆ. ಬಲಗೈಯ ಬೆರಳುಗಳು ಪೆಡಸಾಗಿರುವಂತೆ ತೋರಿಬರುತ್ತಿವೆ. ಹಿಂದಿನ ಚಿತ್ರದಲ್ಲಿದ್ದಂತೆ ಎಡಗೈ ಎದೆಯ ಭಾಗದ ಮೇಲಿದೆ. ಶ್ರೀರಾಮಕೃಷ್ಣರು ಒಂದು ಪಂಚೆಯನ್ನು ಉಟ್ಟು, ಉದ್ದತೋಳಿನ ಜುಬ್ಬವನ್ನು ಧರಿಸಿ, ಕಪ್ಪು ಬಣ್ಣದ ಕೋಟನ್ನು ಹಾಕಿಕೊಂಡಿದ್ದಾರೆ. ಹಿಮ್ಮಡಿಯಿಲ್ಲದ ಚಪ್ಪಲಿಯೊಂದನ್ನು ಮೆಟ್ಟಿಕೊಂಡಿದ್ದಾರೆ. ಆ ದಿವ್ಯ ಆಕೃತಿಯ ಹಿಂದೆ ಪರದೆಯೊಂದಿದ್ದು, ನೆಲಕ್ಕೆ ರಗ್ಗು ಹಾಸಲಾಗಿದೆ. ಶ್ರೀರಾಮಕೃಷ್ಣರು ಅರ್ಧನಿಮೀಲಿತ ನೇತ್ರರಾಗಿದ್ದಾರೆ. ಮುಖ ದಿವ್ಯ ಮಂದಹಾಸವನ್ನು ಚೆಲ್ಲುತ್ತಿದೆ.

ಶ್ರೀರಾಮಕೃಷ್ಣ ವಚನವೇದವು ಈ ಫೋಟೋ ತೆಗೆದ ಸಂದರ್ಭವನ್ನು ಹೀಗೆ ಬಣ್ಣಿಸುತ್ತದೆ : ಅಂದು ದಿನಾಂಕ ಡಿಸೆಂಬರ್ ೧೦, ೧೮೮೧, ಶನಿವಾರ. ಸಮಯ ಮಧ್ಯಾಹ್ನ ೩ ಗಂಟೆ. ಶ್ರೀರಾಮಕೃಷ್ಣರು ಮನಮೋಹನ ಮಿತ್ರನ ಮನೆಗೆ ಆಗಮಿಸಿದರು. ಅಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು, ಲಘು ಉಪಾಹಾರವನ್ನು ಮಾಡಿ, ಅವರು ಕಲ್ಕತ್ತೆಯ ರಾಧಾಬಜಾರ್ ಬಡಾವಣೆಯಲ್ಲಿರುವ ಬೆಂಗಾಲ್ ಫೋಟೋಗ್ರಾಫರ್ಸ್‌ನ ಸ್ಟುಡಿಯೋಗೆ ಹೋದರು. ಫೋಟೋ ತೆಗೆಯುವ ವಿಧಾನವನ್ನು ಮತ್ತು ಅದರ ಹಿಂದಿನ ತಾಂತ್ರಿಕತೆಯನ್ನು ಅವರಿಗೆ ವಿವರಿಸಲಾಯಿತು. ಸಿಲ್ವರ್ ನೈಟ್ರೇಟ್ ಸವರಿದ ಗಾಜಿನ ತುಂಡು ಆಕೃತಿಯನ್ನು ಹಿಡಿದಿಡುವ ಪರಿಯನ್ನು ತೋರಿಸಲಾಯಿತು. ನಂತರ ಅವರ ಫೋಟೋ ತೆಗೆಯುತ್ತಿದ್ದಂತೆ, ಅವರು ಸಮಾಧಿಸ್ಥರಾದರು. ಈ ಬಗ್ಗೆ ಶ್ರೀರಾಮಕೃಷ್ಣರು ಹೇಳುವುದನ್ನು ಕೇಳಿ :

''ಮಾನವನ ಚಿತ್ರ ತೆಗೆಯುವ ಯಂತ್ರವನ್ನು ನಾನಿಂದು ನೋಡಿ ಆನಂದಿಸಿದೆ. ನಾನು ಗಮನಿಸಿದ ಒಂದು ಸಂಗತಿ ಎಂದರೆ, ಬರಿಯ ಗಾಜಿನ ಮೇಲೆ ಚಿತ್ರ ಮೂಡದು. ಕಪ್ಪು ದ್ರವ ಸವರಿದ ಗಾಜಿನ ಮೇಲೆ ಮಾತ್ರ ಮೂಡುವುದು. ಹಾಗೆಯೆ, ಆಧ್ಯಾತ್ಮಿಕ ವಿಚಾರಗಳನ್ನು ಸುಮ್ಮನೆ ಕೇಳುವುದರಿಂದ ಅವು ಮನಸ್ಸಿನಲ್ಲಿ ಮೂಡವು. ಜನರು ಕೇಳಿದೊಡನೆ ಅವನ್ನು ಮರೆತುಬಿಡುವರು. ಆ ಆಧ್ಯಾತ್ಮಿಕ ಉಪದೇಶಗಳು ಗಟ್ಟಿಯಾಗಿ ನೆಲೆ ನಿಲ್ಲಬೇಕಾದರೆ, ವ್ಯಾಕುಲತೆ ಮತ್ತು ಭಕ್ತಿಗಳಿಂದ ಮನಸ್ಸು ತೊಯ್ದು ಹದವಾಗಿರಬೇಕು.''

ಸ್ಟುಡಿಯೋಗೆ ಶ್ರೀರಾಮಕೃಷ್ಣರನ್ನು ಕೊಂಡೊಯ್ದುದು ಭಕ್ತ ಸುರೇಂದ್ರನ ಪೂರ್ವಗಾಮಿ ಯೋಜನೆಯ ಪ್ರಕಾರ ನಡೆದ ಸಂಗತಿ



ಯಾಗಿತ್ತು. ಶ್ರೀರಾಮಕೃಷ್ಣರು ಆ ಕಾಲದ ಆಕರ್ಷಣೀಯ ಸ್ಥಳ ಮತ್ತು ಸಂಗತಿಗಳ ಬಗ್ಗೆ ವಿಶೇಷ ಆಸಕ್ತಿಯನ್ನು ತೋರಿಸುತ್ತಿದ್ದರು. ಅವರು ಕಲ್ಕತ್ತೆಯ ಮೈದಾನದಲ್ಲಿರುವ ಬಲೂನು ಹಾರಾಟ, ಸರ್ಕಸ್, ಪ್ರಾಣಿಸಂಗ್ರಹಾಲಯ, ವಿಲಿಯಮ್ ಕೋಟೆ, ಪಾರ್ಕ್ ರಸ್ತೆಯಲ್ಲಿರುವ ಏಷಿಯಾಟಿಕ್ ಸೊಸೈಟಿಗೆ ಸೇರಿದ ವಸ್ತುಸಂಗ್ರಹಾಲಯ – ಇವುಗಳಿಗೆಲ್ಲ ಭೇಟಿಕೊಟ್ಟಿದ್ದರು ಎಂದು ತಿಳಿದುಬರುತ್ತದೆ. ಅದಲ್ಲದೆ ಹಲವಾರು ಬಾರಿ ನಾಟಕಶಾಲೆಗಳಿಗೆ ಹೋಗಿ ನಾಟಕಗಳನ್ನೂ ನೋಡಿದ್ದರು. ಇದರಿಂದಾಗಿ, ಅವರು ಸ್ಟುಡಿಯೋಗೆ ಹೋಗಿ, ಅಲ್ಲಿ ಕ್ಯಾಮೆರಾ ಮುಂತಾದುವು ಕೆಲಸಮಾಡುವ ವಿಧಾನವನ್ನು ತಿಳಿದುಕೊಳ್ಳಲು ಉತ್ಸುಕರಾಗಿದ್ದುದು ಆಶ್ಚರ್ಯವೇನೂ ಅಲ್ಲ. ಸುರೇಂದ್ರ ಫೋಟೋ ತೆಗೆಯುವವನನ್ನು ಮುಂಚೆಯೇ ಎಚ್ಚರಿಸಿದ್ದ ಎಂದು ತೋರುತ್ತದೆ. ಆದ್ದರಿಂದಲೇ ಫೋಟೋ ತೆಗೆಯುವ ವಿಧಾನದ ಆಧ್ಯಾತ್ಮಿಕ ಒಳನೋಟದ ಚಿಂತನೆಯು ಗುರುಮಹಾರಾಜರ ಮನಸ್ಸನ್ನು ಉನ್ನತ ಮಟ್ಟಕ್ಕೇರಿಸಿ, ಅವರು ಭಾವೋನ್ಮತ್ತರಾದೊಡನೆಯೆ, ಆ ಸುವರ್ಣಾವಕಾಶವನ್ನು ಉಪಯೋಗಿಸಿಕೊಂಡು, ಅವನು ಫೋಟೋವನ್ನು ತೆಗೆದುಬಿಟ್ಟನು.

ಈ ಫೋಟೋದ ನೆಗಟಿವ್ ಬಗ್ಗೆಯಾಗಲೀ ಮೂಲಪ್ರತಿಗಳ



ಬಗ್ಗೆಯಾಗಲೀ ನನಗೆ ಯಾವ ಮಾಹಿತಿಯೂ ದೊರೆಯಲಿಲ್ಲ. ಈ ಸ್ಟುಡಿಯೋ ಚಿತ್ರವನ್ನು ತೆಗೆದೊಡನೆಯೇ, ಆ ಚಿತ್ರವನ್ನು ಸ್ವಲ್ಪ ಮಾರ್ಪಡಿಸಿ ಸರ್ವಧರ್ಮ ಸಮಭಾವವನ್ನು ತೋರಿಸುವ ಸುಪ್ರಸಿದ್ಧ ತೈಲಚಿತ್ರದೊಳಗೆ ಅಳವಡಿಸಲಾಯಿತು. ಇದಕ್ಕೆ ಸಾಕಷ್ಟು ಆಧಾರಗಳಿವೆ. ಈ ತೈಲ ಚಿತ್ರದ ಕಲ್ಪನೆ ಮೊದಲು ರಾಮಚಂದ್ರದತ್ತ ಮತ್ತು ಮನಮೋಹನ ಮಿತ್ರರಿಗೆ ಬಂತು. ಆದರೆ ಅದನ್ನು ಬರೆಸಿದವನು ಸುರೇಂದ್ರ. ಈ ಚಿತ್ರದಲ್ಲಿ ಒಂದು ಚರ್ಚ್, ಮಸೀದಿ ಮತ್ತು ಶಿವದೇಗುಲಗಳನ್ನು ಚಿತ್ರಿಸಲಾಗಿದೆ. ಈ ಪೂಜಾಸ್ಥಾನಗಳ ಮುಂದೆ ವೈಷ್ಣವ, ಶಾಕ್ತ, ಶೈವ, ಕ್ರೈಸ್ತ, ಮುಸಲ್ಮಾನ ಮತ್ತು ಬೌದ್ಧ ಮತದ ಅನುಯಾಯಿಗಳು ನಿಂತುಕೊಂಡಿದ್ದಾರೆ ಮತ್ತು ಕ್ರಿಸ್ತನು ಶ್ರೀಚೈತನ್ಯನೊಡನೆ ನೃತ್ಯವಾಡುತ್ತಿದ್ದಾನೆ. ಅದನ್ನು ಕೆಲ ಭಕ್ತರು ನೋಡುತ್ತಿದ್ದಾರೆ. ಈ ಚಿತ್ರದ ಎಡಮೂಲೆಯಲ್ಲಿ ಶ್ರೀರಾಮಕೃಷ್ಣರು ಕೇಶವಚಂದ್ರಸೇನನ ಗಮನವನ್ನು ಈ ಅಪೂರ್ವ ದೃಶ್ಯದೆಡೆಗೆ ಸೆಳೆಯುತ್ತಿದ್ದಾರೆ. ಶ್ರೀರಾಮಕೃಷ್ಣರು ಈ ಚಿತ್ರದ ಮೂಲ ಪ್ರತಿಯನ್ನು ನೋಡಿದ್ದರೆಂಬುದು ನಮಗೆ ಶ್ರೀರಾಮಕೃಷ್ಣ ವಚನ ವೇದದಲ್ಲಿನ ಈ ಪ್ರಸಂಗದಿಂದ ತಿಳಿದು ಬರುತ್ತದೆ :

ಶ್ರೀರಾಮಕೃಷ್ಣರ ಗಾಡಿಯು ಭಕ್ತ ಸುರೇಶಮಿತ್ರನ ಮನೆಯ ಮುಂದೆ ಬಂದು ನಿಂತಿತು. ಗುರುಮಹಾರಾಜರು ಅವನನ್ನು ಪ್ರೀತಿಯಿಂದ ಸುರೇಂದ್ರ ಎಂದು ಕರೆಯುತ್ತಿದ್ದರು. ನೆಲ ಅಂತಸ್ತಿನ ಒಂದು ಕೊಠಡಿಯ ಬಾಗಿಲನ್ನು ಮನೆಯ ಜನ ತೆರೆದು, ಗುರುಮಹಾರಾಜರನ್ನೂ ಅವರ ಸಂಗಾತಿಗಳನ್ನೂ ಸ್ವಾಗತಿಸಿದರು.... ಶ್ರೀರಾಮಕೃಷ್ಣ ಮತ್ತು ಇತರೆ ಭಕ್ತರನ್ನು ನಂತರ ಮೇಲಂತಸ್ತಿನ ದಿವಾನಖಾನೆಗೆ ಕರೆದೊಯ್ಯಲಾಯಿತು. ನೆಲದ ಮೇಲೆ ಹಾಕಿದ್ದ ಹಾಸಿನ ಮೇಲೆ ಬಿಳಿಯ ಬಟ್ಟೆಯನ್ನು ಹರಡಿದ್ದರು. ಒರಗು ದಿಂಬುಗಳನ್ನು ಜೋಡಿಸಿದ್ದರು. ಗೋಡೆಯ ಮೇಲೆ ಸುರೇಂದ್ರನಿಗಾಗಿಯೇ ಬರೆದ ತೈಲಚಿತ್ರವೊಂದು ತೂಗಾಡುತ್ತಿತ್ತು. ಅದರಲ್ಲಿ ಶ್ರೀರಾಮಕೃಷ್ಣರು ಕೇಶವನಿಗೆ, ಕ್ರೈಸ್ತ, ಇಸ್ಲಾಂ, ಬೌದ್ಧ, ಹಿಂದೂ ಮತ್ತಿತರ ಧರ್ಮಗಳ ಸಾಮರಸ್ಯವನ್ನು ತೋರಿಸುತ್ತಿದ್ದಾರೆ. ಅದನ್ನು ನೋಡಿದ ಕೇಶವ ಉದ್ಗರಿಸಿದನಂತೆ "ಆಹಾ ! ಇದರ ಕಲ್ಪನೆ ಮಾಡಿದವನು ಧನ್ಯ "ಎಂದು.

ಇನ್ನೊಮ್ಮೆ ನಂದಬೋಸನ ಮನೆಯಲ್ಲಿ ಶ್ರೀರಾಮಕೃಷ್ಣರು ಇದರ ಪ್ರತಿಕೃತಿಯೊಂದನ್ನು ನೋಡಿದರೆಂಬುದು ವಚನವೇದದಲ್ಲಿ ದಾಖಲಾಗಿದೆ. ಇದನ್ನು ನೋಡಿದ ಗುರುಮಹಾರಾಜರು ಹೇಳುತ್ತಾರೆ "ಇದು ಸುರೇಂದ್ರನಿಗಾಗಿ ಮಾಡಿಸಿದ್ದು." ಅದಕ್ಕೆ ಪ್ರಸನ್ನನ ತಂದೆ ನಗುತ್ತ ಹೇಳುತ್ತಾನೆ "ನೀವೂ ಆ ಚಿತ್ರದಲ್ಲಿದ್ದೀರಿ." ಶ್ರೀರಾಮಕೃಷ್ಣರೂ ಮುಗುಳ್ನಗುತ್ತ ಹೇಳುತ್ತಾರೆ: **"ಹೌದು, ಇದರಲ್ಲಿ ಎಲ್ಲವೂ ಇದೆ. ಇದೇ ಈ ಆಧುನಿಕ ಕಾಲದ ಆದರ್ಶ."**

ಈ ಚಿತ್ರದ ಚಿತ್ರಕಾರನನ್ನು ಕಂಡುಹಿಡಿಯಲು ನನಗೆ ಸಾಧ್ಯವಾಗಲಿಲ್ಲ. ಅದ್ವೈತ ಆಶ್ರಮದಲ್ಲಿರುವ ಈ ಚಿತ್ರದ ಫೋಟೋ ಒಂದರಲ್ಲಿ "ವಿಲಿ " ಎಂದಿರಬಹುದಾದ ಸಹಿ ಇರುವುದನ್ನು ಗಮನಿಸಿದೆ. ಇದರ ಮೂಲಪ್ರತಿ ಈಗ ಎಲ್ಲಿದೆ ಎಂಬುದನ್ನಾಗಲೀ, ಅದರ ಎಷ್ಟು ಪ್ರತಿಗಳು ಮಾಡಲ್ಪಟ್ಟವು, ಈಗ ಅವುಗಳು ಎಲ್ಲಿವೆ ಎಂಬುದನ್ನಾಗಲೀ ತಿಳಿಯಲಾಗಲಿಲ್ಲ. **(ಮುಂದುವರಿಯುತ್ತದೆ.)**

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಮಾರ್ಚ್ 2002**

| | | |
|---|---|---|
| 9 | ಶನಿವಾರ | ಏಕಾದಶಿ |
| 12 | ಮಂಗಳವಾರ | ಮಹಾಶಿವರಾತ್ರಿ |
| 16 | ಶನಿವಾರ | ಶ್ರೀರಾಮಕೃಷ್ಣ ಜಯಂತಿ |
| 25 | ಸೋಮವಾರ | ಏಕಾದಶಿ |
| 28 | ಗುರುವಾರ | ಶ್ರೀಚೈತನ್ಯ ಜಯಂತಿ |

ಮಾರ್ಚ್ 17 ರಿಂದ 24ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಒಳಗೊಂಡ ಆಶ್ರಮದ ವಾರ್ಷಿಕೋತ್ಸವ

**ತಿದ್ದುಪಡಿ**

ಫೆಬ್ರವರಿ ಸಂಚಿಕೆಯ ೨೩ನೆ ಪುಟದಲ್ಲಿ "ಅರಣ್ಯರೋಧನ " ಬದಲು "ತನಗೆ ಹೆದರಿಕೆ ಇಲ್ಲವೆಂದು ನಟಿಸುವ ಹುಸಿ ಧೈರ್ಯದ ನಡುವಳಿಕೆ " ಎಂದು ಓದಿಕೊಳ್ಳಬೇಕಾಗಿ ವಿನಂತಿ. ಈ ಪ್ರಮಾದಕ್ಕಾಗಿ ಕ್ಷಮೆಯಿರಲಿ.

*– ಲೇಖಕ*